**ಕರ್ನಾಟಕ ಸರ್ಕಾರ**
**ನಿರ್ದೇಶಕರು(ಪ್ರೌಢಶಿಕ್ಷಣ), ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು 560002**

# ಸುತ್ತೋಲೆ

ಸಂಖ್ಯೆ: ನಾ.ನ್ಯ.ಸಂ.ವಿ.ಪ್ರ.ಕಲಾ ಹಾಗೂ ಉತ್ಸವ: 17-18 ದಿನಾಂಕ:25/07/2017

ವಿಷಯ: 2017-18ನೇ ಸಾಲಿನಲ್ಲಿ ರಾಜ್ಯದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಚಾರಗೋಷ್ಠಿ ಆಯೋಜಿಸುವ ಕುರಿತು.

ಉಲ್ಲೇಖ: ವಿ.ಐ.ಟಿ.ಎಂ ರವರ ಪತ್ರ ಸಂಖ್ಯೆ: VM 24(18 )/EDEXT/ NSS-2017 – 9040 Dated: 25/05/2017

******

2017-18 ನೇ ಸಾಲಿನಲ್ಲಿ ಪ್ರೌಢಶಿಕ್ಷಣ ನಿರ್ದೇಶನಾಲಯದ ವತಿಯಿಂದ, ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ಸಲುವಾಗಿ ವಿಜ್ಞಾನಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಾದ ವಿಜ್ಞಾನ ವಿಚಾರ ಗೋಷ್ಠಿ, ವಿಜ್ಞಾನ ನಾಟಕ ಸ್ಪರ್ದೆ ಮತ್ತು ವಿಜ್ಞಾನ ವಸ್ತುಪ್ರದರ್ಶನವನ್ನು ಹಮ್ಮಿಕೊಳ್ಳಲಾಗುತ್ತಿದೆ. ಪ್ರಸಕ್ತ ಸಾಲಿನ ವಿಜ್ಞಾನ ವಿಚಾರ ಗೋಷ್ಠಿಯನ್ನು National Council Of Science Museums Kolkatta, ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ಬೆಂಗಳೂರು ಇವರ ಸಹಯೋಗದೊಂದಿಗೆ ಏರ್ಪಡಿಸಲಾಗಿದೆ.

**<u>ವಿಜ್ಞಾನ ವಿಚಾರ ಗೋಷ್ಠಿಯ ಮುಖ್ಯ ಉದ್ದೇಶಗಳು:</u>**

- ಯುವ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಅನ್ವೇಷಣೆ & ವಿಶ್ಲೇಷಣಾತ್ಮಕ ಪ್ರವೃತ್ತಿಯನ್ನು ಜಾಗೃತಗೊಳಿಸುವುದು.
- ಅರಳುತ್ತಿರುವ ವಿಜ್ಞಾನಿಗಳಿಗೆ ವಿಚಾರ ವಿನಿಮಯಕ್ಕೆ ವೇದಿಕೆ ಸೃಷ್ಟಿಸುವುದು.
- ದೇಶದ ಎಲ್ಲಾ ಯುವ ಪ್ರತಿಭೆಗಳಲ್ಲಿ ರಾಷ್ಟ್ರೀಯ ಏಕತೆಯ ಭಾವನೆ ಬೆಳೆಸುವುದು.

**<u>ವಿಜ್ಞಾನ ವಿಚಾರ ಗೋಷ್ಠಿಯ ವಿಷಯ :-</u>**

**" SWACHH BHARAT: ROLE OF S & T- PROMISES AND CHALLENGES"**
"ಸ್ವಚ್ಛ ಭಾರತ್ : ವಿಜ್ಞಾನ ತಂತ್ರಜ್ಞಾನದ ಪಾತ್ರ-ಭರವಸೆಗಳು ಮತ್ತು ಸವಾಲುಗಳು"

**<u>ವಿದ್ಯಾರ್ಥಿಗಳಿಗೆ ಭಾಗವಹಿಸುವ ಅರ್ಹತೆ:</u>**

ರಾಜ್ಯದಲ್ಲಿ ಸರ್ಕಾರಿ, ಅನುದಾನಿತ, ಅನುದಾನ ರಹಿತ ಹಾಗೂ ಮಾನ್ಯತೆ ಪಡೆದ ಎಲ್ಲಾ ಪ್ರೌಢಶಾಲೆಗಳಲ್ಲಿ 8 ರಿಂದ 10 ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು.

**<u>ವಿಚಾರಗೋಷ್ಠಿಯ ನಿಬಂಧನೆಗಳು:</u>**

**ಭಾಷೆ** : ಕನ್ನಡ/ ಹಿಂದಿ/ ಆಂಗ್ಲ/ ಮಾನ್ಯತೆ ಪಡೆದ ಯಾವುದೇ ಭಾರತೀಯ ಭಾಷೆ

**ಕಾಲಾವಧಿ** : ವಿಷಯ ಮಂಡನೆಗೆ 6 min + ತೀರ್ಪುಗಾರರರ ಪ್ರಶ್ನೋತ್ತರ 2 min ಒಟ್ಟು 8 min

**ವಿಧಾನ** : 1) ಗೋಷ್ಠಿಗೂ ಮುನ್ನ 20 ಪ್ರಶ್ನೆಗಳ 20 ಅಂಕಗಳ ಲಿಖಿತ ಪರೀಕ್ಷೆ – ಅವಧಿ 20 ನಿಮಿಷಗಳು.

2) ವಿಷಯ ಮಂಡನೆ ನಂತರ ನಿರ್ಣಾಯಕರು ಕೇಳುವ 3 ಪ್ರಶ್ನೆಗಳಲ್ಲಿ ಕನಿಷ್ಠ 2 ಕ್ಕೆ ಉತ್ತರಿಸುವುದು.

**ಅಂಕಗಳ ವಿವರ:**

| | |
|---|---|
| ವಿಷಯದಲ್ಲಿನ ವೈಜ್ಞಾನಿಕ ಅಂಶಗಳು<br>Scientific content in the presentation | 40 marks |
| ಪ್ರಸ್ತುತಿಯಲ್ಲಿನ ನಿರರ್ಗಳತೆ<br>Fluency In Speech | 25 marks |
| ಲಿಖಿತ ಪರೀಕ್ಷೆ 20 ನಿಮಿಷಗಳಲ್ಲಿ 20 ಪ್ರಶ್ನೆಗಳನ್ನು ಉತ್ತರಿಸುವ ಸಾಮರ್ಥ್ಯ.<br>Ability to Answer 20 questions in 20 Min. in written Aptitude test | 10 marks |
| ಮೌಖಿಕವಾಗಿ ಉತ್ತರಿಸುವ ಕೌಶಲ<br>Answer to Oral Questions on spot After presentation | 10 marks |
| ದೃಶ್ಯೋಪಕರಣಗಳನ್ನು ಬಳಸುವಲ್ಲಿ ನಾವೀನ್ಯತೆ<br>Novelty in Use of Visuals | 15 marks |
| TOTAL | 100 Marks |

**ದೃಶ್ಯೋಪಕರಣಗಳ ಬಳಕೆ:**

ವಿಷಯ ಮಂಡನೆ ಸಮಯದಲ್ಲಿ ಒಬ್ಬ ಸ್ಪರ್ಧಿಯು ಬಳಸಬಹುದಾದ ಗರಿಷ್ಠ ದೃಶ್ಯೋಪಕರಣ/ ಸ್ಲೈಡ್ /ಚಾರ್ಟ್ ಇತ್ಯಾದಿಗಳ ಸಂಖ್ಯೆ 5 ಮಾತ್ರ (ಎಲ್ಲಾ ಸೇರಿದಂತೆ). ವಿವರಗಳು ಈ ಕೆಳಗಿನಂತಿವೆ.

1) ಚಾರ್ಟ್ /ಪೋಸ್ಟರ್ಸ್- ಗರಿಷ್ಟ 850 mm X 600 mm ಎತ್ತರ ಇವುಗಳನ್ನು ಕ್ಯಾಲೆಂಡರ್ ಮಾದರಿಯಲ್ಲಿ ಹಾಕಿ ಪ್ರದರ್ಶಿಸಬೇಕು- ಒಂದರ ನಂತರ ಒಂದನ್ನು ಪ್ರದರ್ಶಿಸಬೇಕು. ಅಥವಾ
2) 35 ಮಿ.ಮಿ.ಅಳತೆ ಪ್ಲಾಸ್ಟಿಕ್ ಫ್ರೇಮ್ ಮೇಲೆ ಅಳವಡಿಸಿರುವ ಸ್ಲೈಡ್ ನ ಬಳಕೆ. ಅಥವಾ
3) ಎ4 ಅಳತೆಗಿಂತ ಹೆಚ್ಚಿರದ ಒ.ಎಚ್.ಪಿ ಸ್ಲೈಡ್‌ಗಳು ಅಥವಾ
4) ಕಂಪ್ಯೂಟರ್ ಆಧಾರಿತ ಸ್ಲೈಡ್‌ಗಳ ಪ್ರದರ್ಶನ. (Office-2007 PPSX & PPTX Format) ಇದಕ್ಕೆ ಪೂರಕ ಅಂಶಗಳನ್ನು ಸೇರಿಸಬಾರದು. ಉದಾ:- ಅನಿಮೇಷನ್, pop – ups, roll – overs ಅಥವಾ interactions ಇರದಂತೆ

ಸೂಚನೆ: **3D ಮಾದರಿ/ವೀಡಿಯೋ ಗಳಿಗೆ ಅವಕಾಶವಿರುವುದಿಲ್ಲ.**

**ವಿವಿಧ ಹಂತಗಳಲ್ಲಿ ವಿಚಾರ ಗೋಷ್ಠಿಯ ಆಯೋಜನೆಗೆ ವೇಳಾಪಟ್ಟಿ:**

| ಕ್ರ.ಸಂ | ಹಂತ | ನಿಗದಿತ ದಿನಾಂಕ |
|---|---|---|
| 1 | ಶಾಲಾ | ಜುಲೈ 2017 ರೊಳಗೆ |
| 2 | ತಾಲ್ಲೂಕು | 21 ಆಗಸ್ಟ್ 2017 ರೊಳಗೆ |
| 3 | ಜಿಲ್ಲೆ | 11 ಸೆಪ್ಟೆಂಬರ್ 2017 ರೊಳಗೆ * **ಜಿಲ್ಲಾ ಹಂತದಲ್ಲಿ ಕನಿಷ್ಠ 20 ಸ್ಪರ್ಧಿಗಳಿರಬೇಕು.** |
| 4 | ರಾಜ್ಯ | ಅಕ್ಟೋಬರ್ 6 2017 ರೊಳಗೆ ಚಿಕ್ಕಮಗಳುರು ಡಯಟ್ ವತಿಯಿಂದ ಚಿಕ್ಕಮಗಳೂರಿನಲ್ಲಿ ಆಯೋಜನೆಯಾಗಲಿದೆ.<br>**ಪ್ರತಿ ಶೈಕ್ಷಣಿಕ ಜಿಲ್ಲೆಯಿಂದ ಪ್ರಥಮ ಸ್ಥಾನ ಪಡೆದ ಸ್ಪರ್ಧಿ ರಾಜ್ಯ ಹಂತದಲ್ಲಿ ಭಾಗವಹಿಸುವರು** |
| 5 | ರಾಷ್ಟ್ರ | 09ನೇ ನವೆಂಬರ್, 2017 ರ Birla Industrial & Technological Museum, 19A Gurusaday Road, Kolkata-700 019 **ಈ ಸ್ಥಳದಲ್ಲಿ ಆಯೋಜನೆಯಾಗಲಿದೆ**. (ರಾಜ್ಯ ಹಂತದಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿ/ನಿ ರಾಷ್ಟ್ರ ಹಂತದಲ್ಲಿ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ.) |

ಬ್ಲಾಕ್ ಹಾಗೂ ಜಿಲ್ಲಾ ಹಂತದ ಕಾರ್ಯಕ್ರಮವನ್ನು ಡಯಟ್‌ನ ಪ್ರಾಂಶುಪಾಲರು ಆಯೋಜಿಸಬೇಕಿದ್ದು, ಎರಡನೇ ತ್ರೈಮಾಸಿಕದಲ್ಲಿ ಅನುದಾನವನ್ನು ಅಪ್‌ಲೋಡ್ ಮಾಡಲಾಗುವುದು. ಅಗತ್ಯವಿದ್ದಲ್ಲಿ ಲಭ್ಯವಿರುವ

ಅನುದಾನವನ್ನು ಮರುಹೊಂದಾಣಿಕೆ ಮಾಡಿಕೊಳ್ಳುವ ಷರತ್ತಿನೊಂದಿಗೆ ಬಳಸಿಕೊಳ್ಳಲು ಅನುಮತಿಸಿದೆ. ತಾಲ್ಲೂಕು ಹಂತದ ಕಾರ್ಯಕ್ರಮವನ್ನು ಆಯಾ ತಾಲ್ಲೂಕಿನ ಡಯಟ್ ನೋಡಲ್ ಅಧಿಕಾರಿಗಳ ನೇತೃತ್ವದಲ್ಲಿಯೇ ಆಯೋಜಿಸುವುದು.

**ಕಾರ್ಯಕ್ರಮದ ಆಯೋಜನೆಗೆ ವಹಿಸಬೇಕಾದ ಕ್ರಮಗಳು:**

ವಿಚಾರ ಗೋಷ್ಠಿಯ ವಿಷಯವನ್ನು ಸಾಕಷ್ಟು ಮುಂಚಿತವಾಗಿಯೇ ಜಿಲ್ಲೆಯ ಎಲ್ಲಾ ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ತಿಳಿಯುವಂತೆ ಅಗತ್ಯ ಪ್ರಚಾರ ಮತ್ತು ಮಾಹಿತಿಯನ್ನು ನೀಡುವುದು.

- ಬ್ಲಾಕ್ ನ ಎಲ್ಲಾ ಶಾಲೆಗಳಲ್ಲಿ ಕಾರ್ಯಕ್ರಮ ಶಾಲಾ ಹಂತದಲ್ಲಿ ಕಡ್ಡಾಯವಾಗಿ ಆಯೋಜಿಸಲು ಕ್ರಮ ವಹಿಸುವುದು- ನಮೂನೆ 1 ರಲ್ಲಿರುವಂತೆ ಮಾಹಿತಿಗಳನ್ನು ಭರ್ತಿ ಮಾಡಿ ಬ್ಲಾಕ್ ಮತ್ತು ಜಿಲ್ಲಾ ಹಂತದಲ್ಲಿ ಅಂಕಿ ಅಂಶಗಳನ್ನು ಕ್ರೋಢೀಕರಣ ಮಾಡಿ ಮಾಹಿತಿಯನ್ನು ಈ ನಿರ್ದೇಶನಾಲಯಕ್ಕೆ ಸಲ್ಲಿಸುವುದು.
- ಎಲ್ಲಾ ಹಂತದಲ್ಲಿ ವಿಷಯ ಜ್ಞಾನವುಳ್ಳ ಸಂಪನ್ಮೂಲ ವ್ಯಕ್ತಿಗಳನ್ನೇ ಆಯ್ಕೆ ಮಾಡಿಕೊಳ್ಳುವುದು.
- ಡಯಟ್‌ನ ಅಧಿಕಾರಗಳು / ಜಿಲ್ಲಾ ಅಥವಾ ಬ್ಲಾಕ್ ಹಂತದ ಅಧಿಕಾರಿಗಳು, ಕ್ಷೇತ್ರ ಪರಿವೀಕ್ಷಕರು, ಬಿ.ಆರ್.ಪಿ, ಇ.ಸಿ.ಓ ತೀರ್ಪುಗಾರರಾಗಿದ್ದಲ್ಲಿ ಯಾವುದೇ ಸಂಭಾವನೆ ನೀಡುವಂತಿಲ್ಲ.

**ಅನುದಾನದ ವಿವರ : ಬ್ಲಾಕ್ ಹಂತಕ್ಕೆ**

ಬ್ಲಾಕ್ ಹಂತದ ಕಾರ್ಯಕ್ರಮಕ್ಕೆ ರೂ.3000/- ಗಳನ್ನು ಆಯೋಜನಾ ವೆಚ್ಚ ಭರಿಸಲು ಬಿಡುಗಡೆ ಮಾಡಲಾಗುತ್ತಿದ್ದು, ಈ ಮೊತ್ತದಲ್ಲಿ ಸ್ಪರ್ಧಿಗಳಿಗೆ ಪ್ರೋತ್ಸಾಹದಾಯಕ ಬಹುಮಾನ/ ಪ್ರಶಸ್ತಿ ಪತ್ರಗಳನ್ನು ನೀಡಲು ತೀರ್ಪುಗಾರರ ಸಂಭಾವನೆಗೆ ಹಾಗೂ ಲಘು ಉಪಹಾರಕ್ಕಾಗಿ ಬಳಸಬಹುದಾಗಿದೆ.

| ಕ್ರ.ಸಂ. | ಖರ್ಚಿನ ವಿವರ | | ಮೊತ್ತ ರೂ |
|---|---|---|---|
| 1 | ಬಹುಮಾನಗಳ ವಿವರ: | ಪ್ರಥಮ; | 400-00 |
| | | ದ್ವಿತೀಯ: | 300-00 |
| | | ತೃತೀಯ: | 200-00 |
| | ಒಟ್ಟು | | 900-00 |
| 2 | ತೀರ್ಪುಗಾರರ ಸಂಭಾವನೆ: | 300X 2 | 600-00 |
| 3 | ಲಘು ಉಪಹಾರ ಮತ್ತು ಕಾಫಿ /ಟೀ ಆಯೋಜನಾ ವೆಚ್ಚ | | 1500-00 |
| | ಒಟ್ಟು | | ರೂ. 3000-00 |

ಜಿಲ್ಲಾ ಹಂತದ ಕಾರ್ಯಕ್ರಮಕ್ಕೆ ರೂ 12,000/-ಗಳನ್ನು ಬಿಡುಗಡೆ ಮಾಡಲಾಗುವುದು. ಸದರಿ ಮೊತ್ತದಲ್ಲಿ ಈ ಕೆಳಕಂಡ ವೆಚ್ಚಗಳನ್ನು ಭರಿಸುವುದು.

| ಕ್ರ.ಸಂ. | ಖರ್ಚಿನ ವಿವರ | | ಮೊತ್ತ ರೂ |
|---|---|---|---|
| 1 | ಬಹುಮಾನಗಳ ವಿವರ: | ಪ್ರಥಮ; | 1000-00 |
| | | ದ್ವಿತೀಯ: | 750-00 |
| | | ತೃತೀಯ: | 500-00 |
| | 3 ಸಮಾಧಾನಕಾರ ಬಹುಮಾನಗಳು 200*3 | | 600-00 |
| | | ಒಟ್ಟು | 2850-00 |
| 2 | ತೀರ್ಪುಗಾರರ ಸಂಭಾವನೆ: | 400X 3 | 1200-00 |
| 3 | ಟೈಮ್ ಕೀಪರ್ ಸಂಭಾವನೆ, | 1*300=300 | 300-00 |
| | ಲಿಖಿತ ಪ್ರಶ್ನೆ ಪತ್ರಿಕೆ ತಯಾರಿಕೆ ಸಂಭಾವನೆ | 1*300=300 | 300-00 |

| | | |
|---|---|---|
| | | 600-00 |
| 3 | ಲಘು ಉಪಹಾರ ಮತ್ತು ಕಾಫಿ /ಟೀ, ಸ್ಪರ್ಧಿಗಳಿಗೆ ಮತ್ತು ಮಾರ್ಗದರ್ಶಿ ಶಿಕ್ಷಕರಿಗೆ ಟಿ.ಎ.(ಡಿ.ಎ ಇರುವುದಿಲ್ಲ). ಆಯೋಜನಾ ವೆಚ್ಚ | 7350-00 |
| | **ಒಟ್ಟು** | **ರೂ. 12000-00** |

ದಿನಾಂಕ: 25/09 /2017 ರ ಒಳಗಾಗಿ ಜಿಲ್ಲಾ ಹಂತದ ವಿಚಾರ ಗೋಷ್ಠಿಯ ಮಾಹಿತಿಗಳನ್ನು ನಮೂನೆ 1, 2, 3 & 4 ರಲ್ಲಿ ಹಾಗೂ ಕಾರ್ಯಕ್ರಮದ Photo ಸಹಿತ ಕಾರ್ಯಕ್ರಮದ ವರದಿ ಯನ್ನು ಈ ನಿರ್ದೇಶನಾಲಯಕ್ಕೆ ಇ-ಮೇಲ್ ಮತ್ತು ಟಪಾಲಿನ ಮೂಲಕ ಸಲ್ಲಿಸುವುದು.

**ನಮೂನೆ 3 ರ ಮಾಹಿತಿಯನ್ನು** ದಿನಾಂಕ: 25 /09 /2017 ರ ಒಳಗಾಗಿ **ಡಯಟ್ ಚಿಕ್ಕಮಗಳೂರು ಇಲ್ಲಿನ ಇ-ಮೇಲ್ ಐಡಿ** diet.chikmagalore@gmail.com **ಗೆ ಇ ಮೇಲ್ ಮಾಡುವುದು.**

ನಿರ್ದೇಶಕರು (ಪ್ರೌಢಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಗೆ,

ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ

ಪ್ರತಿಯನ್ನು:

1) ನಿರ್ದೇಶಕರು, ಡಿ.ಎಸ್.ಇ..ಆರ್.ಟಿ – ಇವರಿಗೆ ಮಾಹಿತಿಗಾಗಿ
2) ರಾಜ್ಯದ ಎಲ್ಲಾ ಸಿ.ಟಿ.ಇ ಪ್ರಾಂಶುಪಾಲರಿಗೆ. ಇವರಿಗೆ ಮಾಹಿತಿಗಾಗಿ
3) ರಾಜ್ಯದ ಎಲ್ಲಾ ಉಪನಿರ್ದೇಶಕರು (ಆ) ಸಾ.ಶಿ.ಇ ಇವರಿಗೆ ಅಗತ್ಯ ಕ್ರಮಕ್ಕೆ
4) ವಿ.ಐ.ಟಿ.ಎಂ. ಬೆಂಗಳೂರು ಇವರಿಗೆ ಮಾಹಿತಿಗಾಗಿ
5) ಕಚೇರಿ ಪ್ರತಿ

**ನಮೂನೆ-1**

| ಶಾಲೆಯ ಹೆಸರು | ಕಾರ್ಯಕ್ರಮ ಆಯೋಜಿಸಿದ ದಿನಾಂಕ | ಭಾಗವಹಿಸಿದವರ ಸಂಖ್ಯೆ | | | ಭಾಗವಹಿಸಿದ ಪ್ರೇಕ್ಷಕರ ಸಂಖ್ಯೆ | | |
|---|---|---|---|---|---|---|---|
| | | ಗಂ | ಹೆ | ಒಟ್ಟು | ಶಿಕ್ಷಕರು | ವಿದ್ಯಾರ್ಥಿಗಳು | ಒಟ್ಟು |
| | | | | | | | |

**ನಮೂನೆ-2**

| ಜಿಲ್ಲೆಯ ಹೆಸರು | ಕಾರ್ಯಕ್ರಮ ಆಯೋಜಿಸಿದ ಸ್ಥಳ ಮತ್ತು ದಿನಾಂಕ | ಭಾಗವಹಿಸಿದವರ ಸಂಖ್ಯೆ | | | ಭಾಗವಹಿಸಿದ ಪ್ರೇಕ್ಷಕರ ಸಂಖ್ಯೆ | | |
|---|---|---|---|---|---|---|---|
| | | ಗಂ | ಹೆ | ಒಟ್ಟು | ಶಿಕ್ಷಕರು | ವಿದ್ಯಾರ್ಥಿಗಳು | ಒಟ್ಟು |
| | | | | | | | |

**ನಮೂನೆ-3**

| ಜಿಲ್ಲೆಯ ಹೆಸರು | ಜಿಲ್ಲಾ ಹಂತದ ಗೋಷ್ಠಿಯಲ್ಲಿ ಪ್ರಥಮ ಸ್ಥಾನ ಪಡೆದವರ ವಿವರಗಳು | | | | ಷರಾ |
|---|---|---|---|---|---|
| | ವಿದ್ಯಾರ್ಥಿ/ನಿ ಹೆಸರು | ಶಾಲೆಯ ಹೆಸರು ಮತ್ತು ವಿಳಾಸ | ಮೊಬೈಲ್ ಸಂಖ್ಯೆ | ಮಂಡನೆಯಲ್ಲಿ ಉಪಯೋಗಿಸಲಿರುವ ದೃಶ್ಯೋಪಕರಣಗಳು | |
| | | | | | |

**ನಮೂನೆ 4**

| ಜಿಲ್ಲೆಯ ಹೆಸರು | ಜಿಲ್ಲಾ ಹಂತದ ವಿ.ವಿ ಗೋಷ್ಠಿಯ ತೀರ್ಪುಗಾರರ ಹೆಸರು | ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆ ಮತ್ತು ಹುದ್ದೆ | ತೀರ್ಪುಗಾರರ ಸಹಿ |
|---|---|---|---|
| | 1 | | |
| | 2 | | |
| | 3 | | |